ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ
ದಿನಾಂಕ : DATE: 18/02/2020

ಖಾಕಿ ದಿರಸಲ್ಲೇ ವಿಧಾನಸಭೆ ಪ್ರವೇಶಿಸಿದ ರಾವ್ | ಆಯುಕ್ತರನ್ನು ತಡೆದ ಮಾರ್ಷಲ್‌ಗಳು

# ಭಾಸ್ಕರ್ ರಾವ್‌ರಿಂದ ನಡವಳಿ ಉಲ್ಲಂಘನೆ

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ

ಬೆಂಗಳೂರು ಪೊಲೀಸ್ ಆಯುಕ್ತ ಭಾಸ್ಕರ್ ಅವರು ಸೋಮವಾರ ವಿಧಾನಸಭೆಯ ಜಂಟಿ ಅಧಿವೇಶನದಲ್ಲಿ ನಿಯಮ ಉಲ್ಲಂಘಿಸಿ, ಮುಜುಗರಕ್ಕೆ ಒಳಗಾದ ಘಟನೆ ನಡೆದಿದೆ.

ವಿಧಾನಸಭೆ ಹಾಗೂ ಪರಿಷತ್ ನಡವಳಿಯಲ್ಲಿ ಖಾಕಿ ಬಟ್ಟೆಯನ್ನು ಧರಿಸಿ ಪೊಲೀಸರು ಸದನವನ್ನು ಪ್ರವೇಶಿಸುವಂತಿಲ್ಲ ಎನ್ನುವ ನಿಯಮವಿದೆ. ಆದರೆ ರಾಜ್ಯಪಾಲ ವಿ. ಆರ್. ವಾಲಾ ಅವರು ಸದನದೊಳಗೆ ಹೋದ ಬಳಿಕ, ಅವರ ಹಿಂದೆ ಭಾಸ್ಕರ್ ರಾವ್ ತೆರಳಲು ಪ್ರಯತ್ನಿಸುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ.



ಖಾಕಿ ಬಟ್ಟೆಯಲ್ಲಿ ಪ್ರವೇಶಿಸಲು ಮುಂದಾಗುತ್ತಿದ್ದಂತೆ ದ್ವಾರದಲ್ಲಿದ್ದ ಮಾರ್ಷಲ್‌ಗಳು ಖಾಕಿ ಬಟ್ಟೆಯೊಂದಿಗೆ ಪ್ರವೇಶ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಆದರೆ ಇದನ್ನು ಕೇಳದೆ, ಬೆಂಗಳೂರು ನಗರ ಪೊಲೀಸ್ ಆಯುಕ್ತ ನಾನು ಎಂದು ಪ್ರವೇಶಿಸಿದ್ದಾರೆ. ಇದು ಕೆಲ ಕಾಲದ ಮೊಗಸಾಲೆಯಲ್ಲಿ ಗೊಂದಲ ಸೃಷ್ಟಿಸಿತ್ತು.

ಈ ರೀತಿ ನಿಯಮ ಮೀರಿ ವಿಧಾನಸಭೆಯ ಮೊಗಸಾಲೆ ಪ್ರವೇಶಿಸಿದ್ದು ವಿಧಾನ ಸಭಾ ಸ್ಪೀಕರ್ ಕಚೇರಿಗೆ ಮಾಹಿತಿ ರವಾನೆಯಾಗುತ್ತಿದ್ದಂತೆ, ಈ ರೀತಿ ನಡವಳಿ ಮೀರುವುದು ಸರಿಯಲ್ಲವೆಂದು ರಾವ್ ಅವರಿಗೆ ಖಡಕ್ ಸಂದೇಶ ರವಾನಿಸಿದ್ದಾರೆ. ಸಿವಿಲ್ ಪೊಲೀಸರು ಮೊಗಸಾಲೆ ಪ್ರವೇಶಿಸುವಂತಿಲ್ಲ ಎನ್ನುವ ನಿಯಮವಿದ್ದರೂ, ಯೂನಿಫಾರ್ಮ್‌ನಲ್ಲಿ ಒಳಗೆ ಪ್ರವೇಶಿಸಿರುವುದು ಸರಿಯಲ್ಲ. ಈ ರೀತಿ ಮಾಡಿದ್ದಕ್ಕೆ ಕಾರಣವೇನು ಎಂದು ಸ್ಪಷ್ಟೀಕರಣ ಕೇಳಲಾಗಿದೆ ಎಂದು ಮೂಲಗಳು ತಿಳಿಸಿವೆ.

**ಬಿದರಿ ಈ ಹಿಂದೆ ಪ್ರವೇಶಿಸಿದ್ದರು:** ಈ ಹಿಂದೆ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಅಂದಿನ ಬೆಂಗಳೂರು ಪೊಲೀಸ್ ಆಯುಕ್ತ ಶಂಕರ್ ಬಿದರಿ ಅವರ ನೇತೃತ್ವದ ಖಾಕಿ ಪಡೆ ವಿಧಾನ ಸಭೆಯ ಮೊಗಸಾಲೆಯಲ್ಲಿ ಪ್ರವೇಶಿಸಿತ್ತು. ಅಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬಹುಮತ ಸಾಬೀತುಪಡಿಸುವ ವೇಳೆ ಆಡಳಿತ-ವಿರೋಧ ಪಕ್ಷದ ನಡುವೆ ಭಾರಿ ಗಲಾಟೆಯಾಗಿದ್ದರಿಂದ, ಸುರಕ್ಷತಾ ದೃಷ್ಟಿಯಿಂದ ಸಿವಿಲ್ ಪೊಲೀಸರಿಗೆ ಅವಕಾಶ ನೀಡಲಾಗಿತ್ತು. ಇದೇ ಅವಧಿಯಲ್ಲಿ ಶಂಕರ್ ಬಿದರಿ ಅವರು ಅಂದಿನ ಪ್ರತಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಅವರನ್ನು ವಶಕ್ಕೆ ಪಡೆದುಕೊಂಡಿದ್ದರು. ಅದನ್ನು ಹೊರತುಪಡಿಸಿ ವಿಧಾನಸಭೆಯ ಇತಿಹಾಸದಲ್ಲಿ ಯೂನಿಫಾರ್ಮ್‌ನಲ್ಲಿ ಪೊಲೀಸರು ಸದನ ಪ್ರವೇಶ ಮಾಡಿದ ಉದಾಹರಣೆಗಳಿಲ್ಲ.

## ಉಭಯ ಸದನದ ಕಟ್ಟುಪಾಡೇನು?

- ಪೊಲೀಸರು ಖಾಕಿ ಬಟ್ಟೆ ಧರಿಸಿ ಸದನ ಪ್ರವೇಶಿಸುವಂತಿಲ್ಲ
- ಯಾರೊಬ್ಬರು ಕಪ್ಪು ಬಟ್ಟೆ ಧರಿಸಿ ಸದನಕ್ಕೆ ಹೋಗುವಂತಿಲ್ಲ
- ಸದನದೊಳಗೆ ಕಾಲಿನ ಮೇಲೆ ಕಾಲು ಹಾಕಿ ಕೂರುವಂತಿಲ್ಲ
- ವೀಕ್ಷಕರ ಗ್ಯಾಲರಿಯಲ್ಲಿ ಕುಳಿತು ಮಾತನಾಡುವಂತಿಲ್ಲ
- ಸ್ಪೀಕರ್ ಸದನ ಪ್ರವೇಶಿಸುವ ಮೊದಲು ಎಲ್ಲರೂ ಎದ್ದುನಿಂತು ಗೌರವ ಸೂಚಿಸಬೇಕು
- ಕುರ್ಚಿಯಲ್ಲಿ ಕುಳಿತುಕೊಳ್ಳುವ ಹಾಗೂ ಏಳುವ ಮೊದಲು ಸ್ಪೀಕರ್ ಪೀಠಕ್ಕೆ ನಮಸ್ಕರಿಸಬೇಕು.